**ದಿನಾಂಕ 28.01.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಎಸ್.ವಿ.ಎಂ. ವಕೀಲರಿಂದಃ**

1. ನನ್ನ ಮಾವ ದಾಸಪ್ಪನಿಗೆ ವ್ಯವಸಾಯವನ್ನು ಬಿಟ್ಟರೆ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ದಾಸಪ್ಪನಿಗೆ ಕೆಂಚಮ್ಮ ಎಂಬ ಅಕ್ಕ ಇದ್ದರು ಎಂದರೆ ಸರಿ. ಕೆಂಚಮ್ಮನನ್ನು ಅದೇ ಊರಿನ ಲಿಂಗಪ್ಪ ಎನ್ನುವವರಿಗೆ ಕೊಟ್ಟು ಮದುವೆ ಮಾಡಲಾಗಿತ್ತು ಎಂದರೆ ಸರಿ. ಅವರಿಗೆ ಇಬ್ಬರು ಹೆಣ್ಣುಮಕ್ಕಳು ಅವರುಗಳೆಂದರೆ ನರಸಮ್ಮ ಮತ್ತು ಹನುಮಕ್ಕ ಎಂದರೆ ಸರಿ. ನರಸಮ್ಮ ನನನ್ನು ನನ್ನ ಮಾವ ದಾಸಪ್ಪನಿಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಸರಿ. ಹನುಮಕ್ಕ ನನನ್ನು ಕರೆಮಾದನಹಳ್ಳಿಯ ಮರುಡಪ್ಪ ಎನ್ನುವವರಿಗೆ ಮದುವೆ ಮಾಡಿದ್ದರು ಎಂದರೆ ಸರಿ. ಕರೆಮಾದನಹಳ್ಳಿಯಲ್ಲಿ ಹನುಮಕ್ಕ ಮತ್ತು ಮರುಡಪ್ಪನಿಗೆ ಮಕ್ಕಳು ಇದ್ದಾರೆ ಎಂದರೆ ಸರಿ. ಮಹಲಿಂಗಪ್ಪನವರನ್ನು ಕೆಂಚಮ್ಮನವರು ಮಕ್ಕಳಿಲ್ಲದೇ ಇರುವ ಕಾರಣ ಸಣ್ಣ ಹುಡುಗ ಇದ್ದಾಗಿನಿಂದಲೂ ಸಾಕಿಕೊಂಡಿದ್ದರು ಎಂದರೆ ಸಾಕ್ಷಿಯು ಅವರು ತಮ್ಮನಿಗೆ ಕೊಟ್ಟ ಮದುವೆ ಮಾಡಿದ ಕಾರಣ ಅವರು ತಮ್ಮನ ಮನೆಯಲ್ಲಿಯೇ ಇದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

2. ಲಿಂಗಪ್ಪನಿಗೆ ಅವರ ಊರಿಲ್ಲಿ ಸ್ವಂತ ಮನೆ ಮತ್ತು ಸಾಕಷ್ಟು ಆಸ್ತಿಗಳು ಇತ್ತು ಎಂದರೆ ಸರಿ. ಆದಕಾರಣ ಲಿಂಗಪ್ಪ ಮತ್ತು ಕೆಂಚಮ್ಮನವರು ಜೀವಂತವಾಗಿದ್ದಾಗ ಮಹಲಿಂಗಪ್ಪನವರನ್ನು ಸಾಕಿಕೊಂಡಿದ್ದರು ಎಂದರೆ ಅವರು ತಮ್ಮನ ಜೊತೆ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅವರು ಪ್ರತ್ಯೇಕವಾಗಿ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಂಗಪ್ಪ ತೀರಿಕೊಂಡ ನಂತರ ಮಹಲಿಂಗಪ್ಪನವರೇ ತಿಥಿ ಕಾರ್ಯವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ತಮ್ಮನ ಮನೆಯಲ್ಲಿ ಇದ್ದ ಕಾರಣ ನಮ್ಮ ಅತ್ತೆಯೇ ಹೆಣ್ಣುಮಗಳಾಗಿದ್ದು, ನನ್ನ ಮಾವ ಮುಂದೆ ನಿಂತು ಕಾರ್ಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರೇ ಎಲ್ಲಾ ಕಾರ್ಯವನ್ನು ಹಿಂದೂ ಧರ್ಮದ ಪ್ರಕಾರ ಮಾಡಿರುತ್ತಾರೆ ಎಂದರೆ ಇರಬಹುದು, ಮಹಲಿಂಗಪ್ಪನವರು ಹಿರಿಯ ಮಗನಾದ ಕಾರಣ ಯಾರಾದರು ಒಬ್ಬರು ತಲೆ ಬೋಡಿಸಿಕೊಳ್ಳಬೇಕಾದ ಕಾರಣ ಅವರೇ ಮುಂದೆ ನಿಂತು ಮಾಡಿದ್ದಾರೆ ಎಂದು ನುಡಿಯುತ್ತಾರೆ.

3. ಲಿಂಗಪ್ಪ ಮತ್ತು ಕೆಂಚಮ್ಮನ ಕಷ್ಟ ಸುಖಗಳನ್ನು ಮಹಲಿಂಗಪ್ಪನವರೇ ನೋಡಿಕೊಂಡ ಕಾರಣ ಲಿಂಗಪ್ಪನವರು ಜೀವಂತವಾಗಿದ್ದಾಗಲೇ ಕೆಂಚಮ್ಮನಿಗೆ ಆಸ್ತಿಗಳನ್ನು ಮಹಲಿಂಗಪ್ಪನವರ ಹೆಸರಿಗೆ ಬರೆಯುವಂತೆ ಹೇಳಿದ ಕಾರಣ ಕೆಂಚಮ್ಮ ಅದೇ ರೀತಿ ದಾವಾ ಐಟಂ ನಂ. 1, 5, 6, 7, 8, 11, 12, 22 ಮತ್ತು 24 ರ ಆಸ್ತಿಗಳನ್ನು ದಿನಾಂಕ 24.02.1953 ರಲ್ಲಿ ಸ್ವಇಚ್ಚೆಯಿಂದ ದಾನವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕೆಂಚಮ್ಮನಿಗೆ ಏನೂ ಗೊತ್ತಾಗುತ್ತಿರಲಿಲ್ಲ, ಮೋಸ ಮಾಡುವ ಸಲುವಾಗಿ 3 ಜನ ಅಣ್ಣತಮ್ಮಂದಿರಿಗೂ ಬರೆಸದೇ, ಮಹಲಿಂಗಪ್ಪನವರು ಒಬ್ಬರೇ ಯಾವುದೋ ಒಂದು ದಾಖಲಾತಿಯನ್ನು ಬರೆಸಿಕೊಂಡಿದ್ದು, ಆ ಕಾಲದಲ್ಲಿ ಜಯರಾಮಯ್ಯ ಎನ್ನುವ ಸೆಕ್ರೇಟರಿ ಅವರಿಗೆ ಬಹಳ ಆತ್ಮೀಯರಾಗಿದ್ದು, ಸದರಿ ಪತ್ರವನ್ನು ಬರೆಸಿಕೊಂಡಿರುತ್ತಾರೆ. ಜಯರಾಮಯ್ಯ ಯಾವ ವರ್ಷದಲ್ಲಿ ಸೆಕ್ರೇಟರಿ ಆಗಿದ್ದರು ನನಗೆ ಗೊತ್ತಿಲ್ಲ, ನಾನು ಮದುವೆಯಾದ ಕಾಲದಲ್ಲಿ ಅವರು ಇದ್ದರು. ಜಯರಾಮಯ್ಯನಿಗೆ ಆ ಸಮಯದಲ್ಲಿ ಎಷ್ಟು ವಯಸ್ಸು ಮತ್ತು ಯಾವಾಗ ನಿವೃತ್ತಿ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿಯವರು ಗೌಡಗೆರೆ ಪಂಚಾಯತಿ ಕಲ್ಲುಕುಂಟೆಯ ಸೆಕ್ರೇಟರಿ ಆಗಿದ್ದರು.

4. ದಿನಾಂಕ 24.02.1953 ರಲ್ಲಿ ಮಹಲಿಂಗಪ್ಪನವರು ದಾನವಾಗಿ ಪಡೆದ ನಂತರದಿಂದಲೂ ಸದರಿ ಆಸ್ತಿಗಳಲ್ಲಿ ಅವರೇ ಅನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ, ನಾವು ಒಟ್ಟು ಕುಟುಂಬದಲ್ಲಿ ಎಲ್ಲರೂ ಅನುಭವದಲ್ಲಿ ಇದ್ದೇವೆ. ನಾನು ಸುಳ್ಳು ಹೇಳುತ್ತಿದ್ದು, ಮಹಲಿಂಗಪ್ಪನವರು ಜೀವಂತವಾಗಿರುವವರೆಗೂ ಸ್ವಾಧೀನದಲ್ಲಿ ಇದ್ದು, ಅವರು ತೀರಿಕೊಂಡ ನಂತರ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ಎಲ್ಲರೂ ಒಟ್ಟು ಕುಟುಂಬದಲ್ಲಿ ಸ್ವಾಧೀನದಲ್ಲಿ ಇದ್ದೆವು. ಜಮೀನಿನ ಚಕ್ಕು ಬಂದಿ ಹಾಗೂ ಸರ್ವೆ ನಂಬರ್ ಹೇಳಲು ಸಾಧ್ಯವಿಲ್ಲ, ಸುಮಾರು 5-6 ಎಕರೆ ಜಮೀನು ಇರಬಹುದು. ಮಹಲಿಂಗಪ್ಪನವರು ನಿಂಬೇಮರದಹಳ್ಳಿಯಲ್ಲಿ ಹೊಸ ಸಂಬಂಧದಲ್ಲಿ ಮದುವೆಯಾಗಿದ್ದರು ಎಂದರೆ ಸರಿ. ನಮಗೆ ಯಾರೂ ನಿಂಬೇಮರದಹಳ್ಳಿಯಲ್ಲಿ ಸಂಬಂಧಿಕರು ಇಲ್ಲ. ಸದರಿಯವರು ಮದುವೆಯಾದ ನಂತರ ಅವರ ಹೆಂಡತಿ ಮನೆಯವರ ಸಹಾಯದಿಂದ ದಾವಾ ಐಟಂ ನಂ. 29 ರ

ಜಮೀನಿನನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಅದು ದರಕಾಸ್ತಿನಲ್ಲಿ ತೆಗೆದುಕೊಂಡಿದ್ದರು ಹಾಗೂ ಎಲ್ಲಾ ಆಸ್ತಿಗಳನ್ನು ಅವರ ಹೆಸರಿಗೆ ಮಾಡಿಸಿಕೊಂಡಿದ್ದಲ್ಲದೇ ಎಲ್ಲಾ ಹೊಸ ಆಸ್ತಿಗಳನ್ನು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಮತ್ತು ಅವರ ಹೆಂಡತಿಯ ಮನೆಯಲ್ಲಿಯೇ ಅವರು ವಾಸವಾಗಿದ್ದ ಕಾರಣ ಅವರ ಕಡೆಯವರು ಸಹಾಯ ಮಾಡುತ್ತಿದ್ದರು ಹಾಗೂ ಹುಣಸೇ ಗಿಡಗಳನ್ನು ಬೆಳೆಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮಹಲಿಂಗಪ್ಪನವರು ಕೂಲಿ ಕೊಡುತ್ತಿದ್ದ ಕಾರಣ ಅವರ ಹೆಂಡತಿ ಮನೆಯವರು ಹೋಗಿ ಕೆಲಸ ಮಾಡಿಕೊಡುತ್ತಿದ್ದರು ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.29 ರ ಆಸ್ತಿಯು ಸರ್ಕಾರದಿಂದ ಮಹಲಿಂಗಪ್ಪನವರ ಹೆಸರಿಗೆ ಗ್ರಾಂಟ್ ಆಗಿದೆ ಎಂದರೆ ಸರಿ. ಸರ್ಕಾರದಿಂದ ಮಹಲಿಂಗಪ್ಪನವರಿಗೇ ಗ್ರಾಂಟ್ ಆದ ಕಾರಣ ಅವರೇ ಸ್ವಾಧೀನಾನುಭದಲ್ಲಿ ಇದ್ದರು ಎಂದರೆ ಸಾಕ್ಷಿಯು ನನ್ನ ಮಾವನಿಗೆ ವಯಸ್ಸಾಗಿದ್ದು, ಎಲ್ಲಾ ಜವಾಬ್ದಾರಿಯನ್ನು ಮನೆಯ ಹಿರಿಯ ಮಗನಾದ ಮಹಲಿಂಗಪ್ಪನಿಗೆ ಕೊಟ್ಟಿದ್ದ ಕಾರಣ ಅವರೇ ಅನುಭವದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ಜೀವಂತವಾಗಿದ್ದಾಗ ಸ್ವಾಧೀನದಲ್ಲಿ ಇದ್ದು, ಅವರು ತೀರಿಕೊಂಡ ನಂತರ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲದಂತೆ ಅವರ ಮೊಮ್ಮಕ್ಕಳಿಗೆ 5 ಎಕರೆ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ಮದುವೆಯಾದ ನಂತರ ಕುರಿ ಸಾಗಾಣಿಕೆಯನ್ನು ಅವರ ಹೆಂಡತಿಯ ಜೊತೆ ಸೇರಿಕೊಂಡು ಮಾಡುತ್ತಿದ್ದರು ಎಂದರೆ ಸರಿಯಲ್ಲ, ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದು ಕುರಿ ಸಾಗಾಣಿಕೆಯನ್ನು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ.

6. ನಾವು 1990 ರ ಸಾಲಿನವರೆಗೂ ನಾವು ಕುರಿ ಸಾಗಾಣಿಕೆಯನ್ನು ಮಾಡುತ್ತಿದ್ದೆವು. ನನ್ನ ನಾದುನಿಯ ಗಂಡ ಮಹಲಿಂಗಪ್ಪನವರು ಕುರಿ ಮೇಯಿಸಲು ಹೋಗುತ್ತಿದ್ದರು, ಮನೆಯಲ್ಲಿ ಒಬ್ಬೊಬ್ಬರಿಗೆ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದರು. ನನ್ನ ಭಾವನ ಹೆಸರು ಮತ್ತು ನನ್ನ ನಾದುನಿಯ ಗಂಡನ ಹೆಸರೂ ಸಹ ಮಹಲಿಂಗಪ್ಪ ಆಗಿರುತ್ತದೆ. ನನ್ನ ನಾದುನಿಯ ಗಂಡ ಮಹಲಿಂಗಪ್ಪನವರು ಮಾತ್ರ ಕುರಿ ಮೇಯಿಸಲು ಹೋಗುತ್ತಿದ್ದರು. ಇತ್ತಿಚೆಗೆ ನನ್ನ ನಾದುನಿ

ತೀರಿಕೊಂಡಿದ್ದು, ಅಲ್ಲಿಯವರೆಗೂ ನನ್ನ ನಾದುನಿ ಅವರ ಗಂಡ ಮಹಲಿಂಗಪ್ಪ ಮತ್ತು ಅವರ ಮಗಳು ನಮ್ಮ ಮನೆಯಲ್ಲಿಯೇ ಇದ್ದು, ಅವರು ಕುರಿ ಮೇಯಿಸುವ ಕೆಲಸ ಮಾಡುತ್ತಿದ್ದರು. ಸದರಿ ವಿಷಯಗಳನ್ನು ಪ್ರಮಾಣ ದಾವೆ ಮತ್ತು ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ಬರೆಸಿದ್ದೇವೆ, ಒಬ್ಬೊಬ್ಬರಿಗೆ ಒಂದು ಜವಾಬ್ದಾರಿ ವಹಿಸಲಾಗಿತ್ತು ಎಂದು ವಿವರವಾಗಿ ಬರೆಸಿಲ್ಲ, ಆದರೆ ಎಲ್ಲರೂ ಅವರವರ ಕೆಲಸಗಳನ್ನು ಒಟ್ಟು ಕುಟುಂಬದಲ್ಲಿ ಮಾಡಿದ್ದೇವೆ ಎಂದು ನುಡಿಯುತ್ತಾರೆ.

7. ದಾಸಪ್ಪನ ಮೊದಲನೇ ಮಗ ಮಹಲಿಂಗಪ್ಪ ಸಂತೆಗೆ ಕುರಿಗಳನ್ನು ಕರೆದುಕೊಂಡು ಹೋಗಿ ಕುರಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ನಾದುನಿ ಗಂಡ ಮಹಲಿಂಗಪ್ಪನಿಗೆ ವಯಸ್ಸಾದ ಕಾರಣ ನನ್ನ ಭಾವ ಮಹಲಿಂಗಪ್ಪನವರು ಯಜಮಾನಿಕೆಯಲ್ಲಿ ಇದ್ದ ಕಾರಣ ಅವರು ಇದ್ದ ಕುರಿಯನ್ನೆಲ್ಲವನ್ನೂ ಮಾರಿದ್ದರು ಎಂದು ನುಡಿಯುತ್ತಾರೆ. ಯಾವಾಗ ಮಾರಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ, ನನ್ನ ನಾದುನಿಯ ಗಂಡ ಮಹಲಿಂಗಪ್ಪ ನವರು ತೀರಿಕೊಂಡ ನಂತರ ನನ್ನ ಭಾವ ಮಹಲಿಂಗಪ್ಪನವರು ಕುರಿಗಳನ್ನು ಮಾರಿರುತ್ತಾರೆ. ನನ್ನ ಭಾವ ಮಹಲಿಂಗಪ್ಪನವರು ಪಂಚಾಯತಿ ಚೇರ್ ಮ್ಯಾನ್ ಆಗಿದ್ದರು, ನನ್ನ ಮದುವೆಯಾದ ನಂತರ ಆಗಿದ್ದರು. ನನ್ನ ಮದುವೆ 1972 ರಲ್ಲಿ ಆಗಿದೆ, ನನ್ನ ಭಾವ ಮಹಲಿಂಗಪ್ಪನವರು ಎರಡು ಬಾರಿ ಪಂಚಾಯತಿ ಅಧ್ಯಕ್ಷರಾಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸರ್ಕಾರದಿಂದ ಗೌರವಧನವನ್ನು ಕೊಡುತ್ತಾರೆ ಎಂದರೆ ಸರಿ. 10 ವರ್ಷಗಳ ಕಾಲ ಅವರು ಪಂಚಾಯತಿ ಅಧ್ಯಕ್ಷರಾಗಿದ್ದರು ಎಂದರೆ ಇರಬಹುದು, ನನಗೆ ನಿಖರವಾಗಿ ಗೊತ್ತಿಲ್ಲ. ಪಂಚಾಯತಿ ಎಲೆಕ್ಷನ್ 5 ವರ್ಷದ ಅವಧಿ ಎಂದರೆ ಸರಿ.

8. ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ನನ್ನ ಭಾವ ಮಹಲಿಂಗಪ್ಪನವರು ಲೇಬರ್ ಕಂಟ್ರಾಕ್ಟರ್ ಮಾಡುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಲಿಂಗಪ್ಪ ಕಂಟ್ರಾಕ್ಟರ್ ಕೆಲಸ ತೆಗೆದುಕೊಂಡು ಬಂದರೆ, ಮನೆಯ ಉಳಿದ ಸದಸ್ಯರೆಲ್ಲರೂ ಸೇರಿ ಸಿಮೆಂಟ್ ಮತ್ತು ಇಟ್ಟಿಗೆ ತರುವುದು ಎಲ್ಲಾ ಕೆಲಸಗಳನ್ನು ಮನೆಯ ಇತರೆ ಸದಸ್ಯರುಗಳು ಮಾಡುತ್ತಿದ್ದರು ಎಂದು

ನುಡಿಯುತ್ತಾರೆ. ಯಾವ ಊರಿನಲ್ಲಿ ಕಂಟ್ರಾಕ್ಟರ್ ಕೆಲಸ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಎಲ್ಲೆಲ್ಲಿ ಕಂಟ್ರಾಕ್ಟರ್ ಮಾಡಿರುತ್ತಾರೆ, ಅಲ್ಲಿ ಹೋಗಿ ನನ್ನ ಭಾಗ ರಂಗಪ್ಪ ಕೆಲಸ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ಸಣ್ಣವನಿದ್ದಾಗಿನಿಂದಲೂ ಬೇರೆ ಇದ್ದು, ಅವರು ಪ್ರತ್ಯೇಕವಾಗಿ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಹಲಿಂಗಪ್ಪನವರು ಒಟ್ಟು ಕುಟುಂಬದ ಯಾವುದೇ ಸಹಕಾರ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

9. ಅರಣ್ಯ ಇಲಾಖೆಯಲ್ಲಿ ನನ್ನ ಭಾವ ಮಹಲಿಂಗಪ್ಪನವರು ಹುಣಸೇ ಗಿಡ ಮತ್ತು ಮರಗಳ ಕಂಟ್ರಾಕ್ಟರ್ ಮಾಡುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಲಿಂಗಪ್ಪ ಕಂಟ್ರಾಕ್ಟರ್ ಕೆಲಸ ತೆಗೆದುಕೊಂಡು ಬಂದರೆ, ಮನೆಯ ಉಳಿದ ಸದಸ್ಯರೆಲ್ಲರೂ ಸೇರಿ ಹುಣಸೇ ಹಣ್ಣು ಬಡಿಯುವುದು, ಮನೆಗೆ ತರುವುದು, ಮತ್ತು ನಾವೆಲ್ಲರೂ ಹುಣಸೇ ಹಣ್ಣನ್ನು ಕುಟ್ಟಿ ಹುಣಸೇ ಹಣ್ಣನ್ನು ಮಹಲಿಂಗಪ್ಪನವರಿಗೆ ಕೊಡುತ್ತಿದ್ದು, ಮಹಲಿಂಗಪ್ಪನವರು ಮಾರಾಟ ಮಾಡಿಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ಸದರಿ ಕೆಲಸವನ್ನು ಲೇಬರ್ ಇಟ್ಟುಕೊಂಡು ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಹಿಟ್ಟಿನ ಹಿರಿಣಿಯನ್ನು ಮಹಲಿಂಗಪ್ಪನವರು ಇಟ್ಟಿದ್ದರು ಎಂದರೆ ಸರಿ. ಇಟ್ಟಿಗೆ ವ್ಯಾಪಾರವನ್ನೂ ಸಹ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಮನೆ ಕಟ್ಟಬೇಕಾದ ಕಾರಣ ಇಟ್ಟಿಗೆಯನ್ನು ತಯಾರಿ ಮಾಡಿಸಿದ್ದು, ಮನೆ ಕಟ್ಟಿ ಉಳಿದ ಇಟ್ಟಿಗೆಯನ್ನು ಮಹಲಿಂಗಪ್ಪನವರ ಎರಡನೇ ಮಗ ಗೋಪಾಲಯ್ಯನಿಗೆ ಕೆಲಸ ಕೊಡಿಸಲು ಎರಡು ಕೊಠಡಿಯನ್ನು ಪಟ್ಟನಾಯಕನಹಳ್ಳಿಯಲ್ಲಿ ಕಟ್ಟಿಸಿದ್ದರು ಎಂದು ನುಡಿಯುತ್ತಾರೆ.

10. ಮಹಲಿಂಗಪ್ಪನವರು ಪ್ರತ್ಯೇಕವಾಗಿದ್ದು, ಅವರೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಹಲಿಂಗಪ್ಪನವರಿಗೆ ಸಾಕಷ್ಟು ವರಮಾನ ಇದ್ದು, ಮೇಲೆ ಹೇಳಿದ ಕೆಲಸಗಳಿಂದ ಬಂದ ಸ್ವಂತ ಆದಾಯದಿಂದ 19.09.1959 ರಲ್ಲಿ ಮಹಲಿಂಗಪ್ಪ ಬಿನ್ ಲಿಂಗಪ್ಪ ಎನ್ನುವವರ ಕಡೆಯಿಂದ ಶುದ್ಧ ಕ್ರಯಕ್ಕೆ ದಾವಾ ಐಟಂ ನಂ 10 ರ ಆಸ್ತಿಯನ್ನು ಖರೀದಿ ಮಾಡಿದ್ದರು

ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಮಹಲಿಂಗಪ್ಪನವರು ದಾವಾ ಐಟಂ ನಂ. 10 ರ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಸರ್ವೆ ನಂ. 119/5 ಎಂದು ಇದ್ದು, ದುರಸ್ತಾದ ನಂತರ ಸರ್ವೆ ನಂ. 163 ಆಗಿದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಮಹಲಿಂಗಪ್ಪನವರು ತಮ್ಮ ಸ್ವಯಾರ್ಜಿ ಆದಾಯದಿಂದ ದಾವಾ ಐಟಂ ನಂ. 4 ನ್ನು ದಿನಾಂಕ 06.12.1968 ರಲ್ಲಿ ಬಿ.ಹೆಚ್.ಹನುಮಂತರಾಯಪ್ಪ ಬಿನ್ ಹನುಮಂತಪ್ಪ ಎನ್ನುವವರಿಂದ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಅದು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**